
# ಹುಣಸೋಡು ಸ್ಫೋಟ ತನಿಖೆಗೆ 5 ತಂಡ

▫ ವಿಕ ಸುದ್ದಿಲೋಕ ಶಿವಮೊಗ್ಗ 25-1-21

ಹುಣಸೋಡು ಸ್ಫೋಟದ ಸಮಗ್ರ ತನಿಖೆ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯು 5 ತಂಡಗಳನ್ನು ರಚಿಸಿದೆ.



ಐವರು ಇನ್‌ಸ್ಪೆಕ್ಟರ್‌ಗಳ ನೇತೃತ್ವದ ಪಿಎಸ್‌ಐ ಮತ್ತು ಇತರ ಸಿಬ್ಬಂದಿಯ ತಂಡವನ್ನು ಎಸ್ಪಿ ಕೆ.ಎಂ.ಶಾಂತರಾಜು ಅವರು ರಚನೆ ಮಾಡಿದ್ದಾರೆ. ತಂಡಗಳು ಈಗಾಗಲೆ ತನಿಖೆ ಆರಂಭಿಸಿವೆ.

ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರು ಯಾರು, ಕಲ್ಲು ಕ್ವಾರಿಗಳಿಗೆ ಅನುಮತಿಯ ಇಲ್ಲದ ಮೇಲೆ ಇಲ್ಲಿರುವ 50ಕ್ಕೂ ಹೆಚ್ಚು ಕ್ರಷರ್‌ಗಳಿಗೆ ಕಲ್ಲುಗಳು ಎಲ್ಲಿಂದ ಬರುತ್ತಿವೆ. ಈ ದಂಧೆ ಹಿಂದಿರುವ ಪ್ರಭಾವಿಗಳು ಯಾರು ಎಂಬೆಲ್ಲ ವಿಚಾರಗಳ ಕುರಿತು ತನಿಖೆ ನಡೆಸಲಾಗುತ್ತದೆ ಎಂದು ತಿಳಿದು ಬಂದಿದೆ.

**ಸಜೀವ ಸ್ಫೋಟಕಗಳ ಪತ್ತೆ:** ಸ್ಫೋಟ ಸ್ಥಳದ ಬಳಿ ಪತ್ತೆ ಕಾರ್ಯ ನಡೆಸಿದ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳಕ್ಕೆ (ಬಿಡಿಡಿಎಸ್) 63 ಸಜೀವ ಡಿಟೋನೇಟರ್ ಮತ್ತು 4 ಸಜೀವ ಜಿಲೆಟಿನ್ ಪೇಸ್ಟ್ ಸಿಕ್ಕಿದೆ ಎನ್ನಲಾಗಿದೆ. ಸ್ಫೋಟ ನಡೆದ ಸ್ಥಳದಿಂದ ಸುಮಾರು 200 ಮೀ. ದೂರದಲ್ಲಿರುವ ಕಟ್ಟಡದೊಳಗೆ ಈ ಸ್ಫೋಟಕಗಳನ್ನು ಕವರ್‌ನಲ್ಲಿ ಸುತ್ತಿ ಇಡಲಾಗಿತ್ತು.

ಆದರೆ, ಅವುಗಳ ಮೇಲೆ ತಯಾರಕ ಕಂಪನಿಯ ಹೆಸರು ನಮೂದಿಸಿಲ್ಲ. ಅಲ್ಲದೆ ಅವುಗಳನ್ನು ಬಹಳ ಹಿಂದೆಯೆ ಶೇಖರಿಸಿ ಇಡಲಾಗಿತ್ತು ಎನ್ನಲಾಗಿದೆ. ಬಿಡಿಡಿಎಸ್ ಅಧಿಕಾರಿಗಳು ಸಜೀವ ಸ್ಫೋಟಕ ಸಾಮಗ್ರಿಗಳನ್ನು ಶಿವಮೊಗ್ಗ ಗ್ರಾಮಾಂತರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ನ್ಯಾಯಾಲಯದ ಅನುಮತಿ ಪಡೆದು ಬಳಿಕ ನಿಷ್ಕ್ರಿಯಗೊಳಿಸಲಾಗುತ್ತದೆ ಎಂದು ತಿಳಿದು ಬಂದಿದೆ.

## ಕಲ್ಲು ಗಣಿಗೆ ಕಠಿಣ ಕಾನೂನು ಜಾರಿ

**ಚಿಕ್ಕಮಗಳೂರು:** ಸ್ಫೋಟಕ ಸಾಮಗ್ರಿಗಳ ಸಾಗಣೆ, ಸಂಗ್ರಹ ಮತ್ತು ಬಳಕೆ ಬಗ್ಗೆ



ಸರಕಾರ ಕಠಿಣ ಕಾನೂನು ತರಲಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು. ಪ್ರವಾಸಿ ಮಂದಿರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಹುಣಸೋಡಿನಲ್ಲಿ ಘಟನೆ ನಡೆದ ಕೂಡಲೇ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ತಂಡವನ್ನು ಕಳುಹಿಸಿಕೊಡಲಾಗಿದೆ. ಅವರ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಹುಣಸೋಡಿನಲ್ಲಿ ಸ್ಫೋಟಕಗಳನ್ನು ಕಲ್ಲುಗಣಿಗಾರಿಕೆಗೆ ತಂದಿರಬಹುದು. ಆದರೆ, ಇದನ್ನು ಬೇರೆ ಕೃತ್ಯಕ್ಕೂ ಬಳಸಬಹುದು. ಹೀಗಾಗಿ ಕಾನೂನು ನಿಯಮಾವಳಿಗಳನ್ನು ಬಿಗಿ ಮಾಡಲು ಸರಕಾರ ಗಣಿ ಸಚಿವರ ಬಳಿ ಮಾತುಕತೆ ನಡೆಸಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಿದೆ," ಎಂದರು.

## ನಿಷ್ಪಕ್ಷಪಾತವಾಗಿ ತನಿಖೆ [illegible]

**ಚಿಕ್ಕಮಗಳೂರು:** ಶಿವಮೊಗ್ಗ ಜಿಲ್ಲೆಯ ಹುಣಸೋಡಿನಲ್ಲಿ ಸ್ಫೋಟಕ ಸಾಮಗ್ರಿಗಳು



ಸಿಡಿದ ಘಟನೆ ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗಲಿದೆ ಎಂದು ಶಾಸಕ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, "ಸ್ಫೋಟಕ ವಸ್ತುಗಳು ಇಷ್ಟು ಸುಲಭವಾಗಿ ಸಿಗುವುದು ಬಹಳ ಅಪಾಯಕಾರಿ ಬೆಳವಣಿಗೆ. ಇಂದು ಕಲ್ಲುಗಣಿಗಾರಿಕೆಗೆ, ನಾಳೆ ಭಯೋತ್ಪಾದಕರಿಗೆ ಸ್ಫೋಟಕ ಸಾಮಗ್ರಿ ಸಿಕ್ಕರೆ ಅಥವಾ ಜನದಟ್ಟಣೆ ಪ್ರದೇಶದಲ್ಲಿ ಘಟನೆ ಆಗಿದ್ದರೆ ಹಾನಿಯ ಬಗ್ಗೆ ಊಹಿಸಲು ಅಸಾಧ್ಯ. ಹೀಗಾಗಿ ಪ್ರಕರಣವನ್ನು ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ನಿಷ್ಪಕ್ಷ ತನಿಖೆ ನಡೆಸಲು ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ," ಎಂದರು. "ಅಕ್ರಮ ಕಲ್ಲುಗಣಿಗಾರಿಕೆ ಪತ್ತೆ ಹಚ್ಚಿ ಜಿಲ್ಲಾಡಳಿತ ನಿಯಂತ್ರಣಕ್ಕೆ ತರಬೇಕು," ಎಂದು ಹೇಳಿದರು.

## ಅಕ್ರಮ ಗಣಿಗಾರಿಕೆ ತಡೆಗೆ ಡಿಸಿಗಳಿಗೆ ಸೂಚನೆ

**ಶಿವಮೊಗ್ಗ:** ರಾಜ್ಯದೆಲ್ಲೆಡೆ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುವವರು ಜಿಲ್ಲಾಧಿಕಾರಿಗೆ ಅರ್ಜಿ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಬಳಿಕ ಅರ್ಜಿಗಳನ್ನು ಪರಿಶೀಲಿಸಿ ಸೂಚನೆ ನೀಡಲಾಗಿದೆ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ಹೇಳಿದರು.



ನಗರದ ಹೆಲಿಪ್ಯಾಡ್‌ನಲ್ಲಿ ಭಾನುವಾರ ಬೆಂಗಳೂರಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, "ರಾಜ್ಯದಲ್ಲಿ ಇನ್ನು ಮುಂದೆ ಅಕ್ರಮ ಗಣಿಗಾರಿಕೆಗಳು ನಡೆದಲ್ಲಿ ಅದಕ್ಕೆ ಡಿಸಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು," ಎಂದರು.

"ಅಕ್ರಮ ಕಲ್ಲು ಗಣಿಗಾರಿಕೆಗೆ ಸರಕಾರದಿಂದ ಯಾವುದೇ ರೀತಿಯ ಬೆಂಬಲ ನೀಡಲು ಸಾಧ್ಯವೇ ಇಲ್ಲ. ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುವವರು ಸಕ್ರಮ ಮಾಡಿಕೊಳ್ಳಬೇಕು ಎಂಬುದು ಅಕ್ರಮವನ್ನು ಸಕ್ರಮ ಮಾಡುವ ಉದ್ದೇಶವಿದೆ ಎಂಬರ್ಥವಲ್ಲ, ಅಕ್ರಮವಾಗಿ ಅಗತ್ಯವಿದ್ದರೆ ಮಾತ್ರ ಪರವಾನಗಿ ನೀಡಲಾಗುವುದು," ಎಂದು ಸ್ಪಷ್ಟಪಡಿಸಿದರು.

"ಕೃಷ್ಣರಾಜ ಸಾಗರ ಜಲಾಶಯದ ಬಳಿ ಬೇಬಿ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಜಲಾಶಯದ ಕಟ್ಟಡ ಭದ್ರತೆಗೆ ಸಮಸ್ಯೆ ಇರುವುದು ಗಮನದಲ್ಲಿದೆ. ಹಲವು ಬಾರಿ ನಿಲ್ಲಿಸುವಂತೆ ಸೂಚಿಸಲಾಗಿದೆ. ಆದರೂ ಅಲ್ಲೊಂದು ಇಲ್ಲೊಂದು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಜಲ್ಲಿ ಬೇಕು. ಆದರೆ, ಅಕ್ರಮ ಗಣಿಗಾರಿಕೆ ನಿಲ್ಲಬೇಕು. ಅಭಿವೃದ್ಧಿಗೆ ಕೊರತೆ ಆಗಬಾರದು," ಎಂದರು.

## ಗಣಿ ಮಾಫಿಯಾ ಜತೆ ಸಿಎಂ ಶಾಮೀಲು

**ನಾಗಮಂಗಲ:** ನಾನು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡಿಲ್ಲ ಎಂದು



ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ತಾಲೂಕಿನ ಕಲ್ಲುದೇವನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, "ಶಿವಮೊಗ್ಗ ಪ್ರಕರಣದ ನಂತರ ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡಿಕೊಳ್ಳಿ ಎಂದು ಸಿಎಂ ಯಡಿಯೂರಪ್ಪ ಹೇಳಿರುವುದರ ಹಿಂದೆ ಗಣಿ ಮಾಫಿಯಾ ಕೈವಾಡವಿದೆ. ಗಣಿ ಮಾಫಿಯಾ ಜತೆ ಶಾಮೀಲಾಗಿದ್ದಾರೆ. ಆದ್ದರಿಂದ ಗಣಿಗಳನ್ನು ಸಕ್ರಮಗೊಳಿಸಲು ಮುಂದಾಗಿದ್ದಾರೆ," ಎಂದು ನುಡಿದರು.

"ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ನಾರಾಯಣಗೌಡ ಈಗ ಅಕ್ರಮ ಗಣಿಗಾರಿಕೆ ಬಗ್ಗೆ ಮಾತನಾಡುತ್ತಿದ್ದಾರೆ. ಕಳೆದ 14 ತಿಂಗಳಿನಿಂದ ಸಚಿವರು ಎಲ್ಲಿ ಹೋಗಿದ್ದರು, ಅಕ್ರಮ ಗಣಿಗಾರಿಕೆಯನ್ನು ಏಕೆ ತಡೆಯಲಿಲ್ಲ?," ಎಂದು ಪ್ರಶ್ನಿಸಿದರು.

### ಸಚಿವರಿಗೆ ಟಾಂಗ್

"ಮಂಡ್ಯದಲ್ಲಿ ಶೇ.87 ರಷ್ಟು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ರಾಜ್ಯದಲ್ಲಿ ಅತಿಹೆಚ್ಚು ಅಕ್ರಮ ಗಣಿಗಾರಿಕೆ ಮಂಡ್ಯದಲ್ಲಿದೆ. ಎನ್‌ಒಸಿ ನೀಡಲು 10 ಲಕ್ಷ ರೂ. ಫಿಕ್ಸ್ ಮಾಡಿಕೊಂಡಿದ್ದಾರೆ. ಈ 10 ಲಕ್ಷ ರೂಪಾಯಿ ಎಲ್ಲಿ ಹೋಗುತ್ತಿದೆ?, ಇದರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಸತ್ಯ ಹೇಳಬೇಕು" ಎಂದರು.

"ಮಂತ್ರಿಯಾಗಿದ್ದುಕೊಂಡು ಜಿಲ್ಲೆಯ ನೈಸರ್ಗಿಕ ಆಸ್ತಿಯನ್ನು ಉಳಿಸಬೇಕು, ಅದನ್ನು ಬಿಟ್ಟು ಈಗ ಮಾಧ್ಯಮಗಳಲ್ಲಿ ಹೇಳಿಕೆ ಕೊಟ್ಟು ರೇಟ್ ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ," ಎಂದು ಕುಮಾರಸ್ವಾಮಿ ಆರೋಪಿಸಿದರು.

## ಎಂಟು ಬಾಕ್ಸ್ ಜಿಲೆಟಿನ್ ವಶ

**ರಾಣೇಬೆನ್ನೂರ (ಹಾವೇರಿ):** ಪೊಲೀಸರು ದಾಳಿ ನಡೆಸಿ ಕಲ್ಲು ಗಣಿಗಾರಿಕೆಗಾಗಿ ಅನಧಿಕೃತವಾಗಿ ಸಂಗ್ರಹ ಮಾಡಿಕೊಂಡಿದ್ದ ಜಿಲೆಟಿನ್ ಬಾಕ್ಸ್‌ಗಳನ್ನು ವಶಪಡಿಸಿಕೊಂಡ ಘಟನೆ ತಾಲೂಕಿನ ಕೂನಬೇವು ಗ್ರಾಮದ ಹತ್ತಿರ ಭಾನುವಾರ ನಡೆದಿದೆ. ಕೂನಬೇವು ಗ್ರಾಮಕ್ಕೆ ಹತ್ತಿರವಿರುವ ಕ್ವಾರಿಗೆ ಹೋಗುವ ಕಚ್ಚಾ ರಸ್ತೆಯಲ್ಲಿ ಅಪರಿಚಿತ ವ್ಯಕ್ತಿಗಳು 8 ಬಾಕ್ಸ್‌ಗಳಲ್ಲಿ ಅಂದಾಜು 16 ಸಾವಿರ ರೂ. ಮೌಲ್ಯದ ಜಿಲೆಟಿನ್ ಟ್ಯೂಬ್‌ಗಳು ಹಾಗೂ ಒಂದು ಬಾಕ್ಸ್‌ನಲ್ಲಿ 9500 ರೂ.. ಮೌಲ್ಯದ 950 ಮೀಟರ್ ಈಡಿ ವೈರ್ ಸಂಗ್ರಹ ಮಾಡಿಕೊಂಡ ಕುರಿತು ದೂರು ಕೇಳಿಬಂದ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ಸಿಪಿಐ ಶ್ರೀಶೈಲ ಚೌಗಲಾ ದೂರು ದಾಖಲಿಸಿಕೊಂಡಿದ್ದಾರೆ. ಆರೋಪಿಗಳ ಪತ್ತೆಗಾಗಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.